ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/03/ಅ.ಸಾ.ವಿ/2023-24/ಉಗ್ರಾಣ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:30.10.2023

## ಸುತ್ತೋಲೆ

ವಿಷಯ:- ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಅನುಪಯುಕ್ತ/ನಿರುಪಯುಕ್ತ ಸಾಮಾಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಪತ್ರ ಸಂಖ್ಯೆ:-ಇಡಿ/60/ವಿವಿಧ/2023. ದಿನಾಂಕ:14.08.2023. ದಿನಾಂಕ:30.08.223.
2. ಸುತ್ತೋಲೆ ಸಂಖ್ಯೆ:ಕಾಶಿಇ/11/ಅ.ಕಾ.ನಿ.ಸಾ/ಉಗ್ರಾಣ/2013-14. ದಿನಾಂಕ:05.09.2022.

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ) ಮೈಸೂರು, ಶ್ರೀ ಡಿ ದೇವರಾಜ ಅರಸು ಜನ ಸೇವಾ ಮತ್ತು ಶಿಕ್ಷಣ ಅಭಿವೃದ್ಧಿ ಸಂಸ್ಥೆ, ದಾವಣಗೆರೆ ಜಿಲ್ಲೆ, ಹಾಗೂ ಜನ ಮಿತ್ರ ಸಮಾಜ ಸೇವಾ ಸಂಸ್ಥೆ (ರಿ) ಚಿತ್ರದುರ್ಗ ಜಿಲ್ಲೆ, ಇವರ ಮನವಿಯಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು, ಇವರು ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿ ಮತ್ತು ಕಾಲೇಜುಗಳಲ್ಲಿನ ಅನುಪಯುಕ್ತ ಸಾಮಾಗ್ರಿಗಳನ್ನು ಸದರಿ ಸಂಸ್ಥೆಗಳಿಗೆ ನೀಡಲು ನಿಯಾಮಾನುಸಾರ ಅಗತ್ಯ ಕ್ರಮವಹಿಸುವಂತೆ ನಿರ್ದೇಶಿಸಿರುವುದರಿಂದ, ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಈ ಕಛೇರಿಯ ಉಲ್ಲೇಖ (2)ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ;-

ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ಕಛೇರಿಗಳಿಗೆ ಹಾಗೂ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಅಗತ್ಯ ಕ್ರಮಕ್ಕಾಗಿ)

ಪ್ರತಿ ರವಾನೆ ಮಾಹಿತಿಗಾಗಿ;-

1. ನೋಡಲ್ ಅಧಿಕಾರಿ, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು, ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
2. ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ), 923 8ನೇ ಮುಖ್ಯ ರಸ್ತೆ ಗೋಕುಲಂ, 3 ನೇ ಹಂತ, ಮೈಸೂರು.
3. ಶ್ರೀ ಡಿ ದೇವರಾಜ ಅರಸು ಜನ ಸೇವಾ ಮತ್ತು ಶಿಕ್ಷಣ ಅಭಿವೃದ್ಧಿ ಸಂಸ್ಥೆ, ನಂ 818 ಶ್ರೀ ರೇವಣಸಿದ್ದಪ್ಪ ಬಡವಾಣೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ಜಿಲ್ಲೆ.
4. ಜನ ಮಿತ್ರ ಸಮಾಜ ಸೇವಾ ಸಂಸ್ಥೆ (ರಿ), 1ನೇ ಮುಖ್ಯ ರಸ್ತೆ, 2 ನೇ ತಿರುವು, ಅಜಾದ್ ನಗರ ಚಿತ್ರದುರ್ಗ ಜಿಲ್ಲೆ.-577501
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ,
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ.ಕಾಶಿಇ/11/ಅಕಾನಿಸಾ/ ಉಗ್ರಾಣ /2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 5-09-2022.

## ಸುತ್ತೋಲೆ

ವಿಷಯ : ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ನಿರುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ:ಇಡಿ/12/ಹೆಚ್‌ಪಿಸಿ/2022 ದಿನಾಂಕ: 04.08.2022

2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳ ಟಿಪ್ಪಣಿ. HREDN/IT- BT.S&T.SD/PD/5085/2022-23, ದಿ: 20.07.2022
3. ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ) ದಲಿತ ನಿರುದ್ಯೋಗಿಗಳ ಸಂಸ್ಥೆ, ಗೋಕುಲಂ, ಮೈಸೂರು ಇವರ ಮನವಿ ಪತ್ರದ ದಿನಾಂಕ: 20.07.2022
4. ಸರ್ಕಾರದ ಆದೇಶ ಸಂಖ್ಯೆ: ಕಂಇ/18/ಎಂಎಸ್‌ಟಿ/2019, ದಿನಾಂಕ: 12.06.2020.
5. ಸರ್ಕಾರದ ಆದೇಶ ಸಂಖ್ಯೆ: ಆಇ/03/ಟಿಎಸ್‌ಪಿ/2018, ದಿನಾಂಕ: 14.05.2018.
6. ಈ ಕಛೇರಿ ಸೂತ್ತೋಲೆ ಸಂಖ್ಯೆ: DCE/06/BUD/91-92, ದಿನಾಂಕ: 27.01.1992.
7. ಸರ್ಕಾರದ ಆದೇಶ ಸಂಖ್ಯೆ: FD/03/TFP/1980, ದಿನಾಂಕ: 29.04.81.
8. ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು, ಇವರ ಜ್ಞಾಪನ ಸಂ.ಪಪೂಶಿಇ/ಆವಿ(ಬಿ) ಅನಾವಿಲೇ/2021-22, ದಿನಾಂಕ: 22.06.2022.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರಿನ ಗೋಕಲಂನ ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ). ದಲಿತ ನಿರುದ್ಯೋಗಿಗಳ ಸಂಸ್ಥೆ ಇವರು ಉಲ್ಲೇಖ(3) ರ ಪ್ರಕಾರ ಮಾನ್ಯ ಉನ್ನತ ಶಿಕ್ಷಣ ಪ್ರಧಾನ ಕಾರ್ಯದರ್ಶಿಗಳಿಗೆ ಮನವಿಯನ್ನು ಸಲ್ಲಿಸಿ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಕಛೇರಿಗಳಲ್ಲಿ ನಿರುಪಯುಕ್ತ ಸಾಮಗ್ರಿಗಳ ವಿಲೇವಾರಿ ಮಾಡುವ ಸಂಬಂದ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರು ಅನುಪಯುಕ್ತ ಸಾಮಾಗ್ರಿಗಳಿಗೆ ದರ ನಿಗದಿಪಡಿಸಿದ್ದು ಸದರಿ ಸಂಸ್ಥೆಗೆ ವಿಲೇವಾರಿ ಮಾಡುವಂತೆ ಆದೇಶ ನೀಡಿದ್ದು, ಅದರಂತೆ, ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕಛೇರಿ/ಸಂಸ್ಥೆಗಳಲ್ಲಿ ಇರುವಂತಹ ಅನುಪಯುಕ್ತ ಸಾಮಗ್ರಿಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ನಿಗಧಿಪಡಿಸಿರುವ ದರದಲ್ಲಿ ನಮ್ಮ ಸಂಸ್ಥೆಗೆ ನೀಡುವಂತೆ ಕೋರಿರುತ್ತಾರೆ.

ಸದರಿ ಮನವಿಗೆ ಸಂಬಂಧಿಸಿದಂತೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಆಪ್ತ ಕಾರ್ಯದರ್ಶಿಗಳು ಉಲ್ಲೇಖ (2) ರ ಟಿಪ್ಪಣಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸದರಿ ಮನವಿ ಲಗತ್ತಿಸಿ, ಸದರಿಯವರ ಮನವಿಯನ್ನು ಪರಿಗಣಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿರುವ ಹಿನ್ನಲೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಉಲ್ಲೇಖ (1) ರ ಪತ್ರದಲ್ಲಿ ಕೋರಿರುವ ಅಂಶಗಳನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

............2

ಪರಿಶೀಲಿಸಲಾಗಿ, ಉಲ್ಲೇಖ(7)ರ ಸರ್ಕಾರದ ಆದೇಶದಲ್ಲಿ ಹಾಗೂ ಈ ಕಛೇರಿ ಉಲ್ಲೇಖ(6)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಾನಾಂತರ ಹುದ್ದೆ ಎಂದು ಪರಿಗಣಿಸಿರುವ ಹಿನ್ನಲೆಯಲ್ಲಿ ಹಾಗೂ ಉಲ್ಲೇಖ(5)ರ ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ ಇಲಾಖಾ ಮುಖ್ಯಸ್ಥರು/ವಿಭಾಗ/ಜಿಲ್ಲೆ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪ್ರತ್ಯಾಯೋಜಿಸಿದ್ದು. ಈ ಅಧಿಕಾರದ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿರುವ ನಿರುಪಯುಕ್ತ ಸಾಮಗ್ರಿಗಳನ್ನು ಪಟ್ಟಿ ಮಾಡಿ, ದುರಸ್ಥಿಪಡಿಸಿ ಉಪಯೋಗಿಸಿಲು ಸಾಧ್ಯವಿರುವ ಸಾಮಗ್ರಿಗಳನ್ನು ದುರಸ್ಥಿಪಡಿಸಿ ಉಪಯೋಗಿಸಲು ಹಾಗೂ ದುರಸ್ಥಿಪಡಿಸಲು ಸಾಧ್ಯವಾಗದಿದ್ದ ಸಾಮಗ್ರಿಗಳನ್ನು ಉಲ್ಲೇಖ(5). (6). (7) ಮತ್ತು (8) ರ ಆದೇಶ/ಸುತ್ತೋಲೆ/ ಜ್ಞಾಪನ ಪ್ರಕಾರ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ನೋಡಲ್ ಅಧಿಕಾರಿ, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು.

ಪ್ರತಿ ರವಾನೆ- ಮಾಹಿತಿಗಾಗಿ

1. ಮಾನ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
2. ಶ್ರೀ. ಬಿ.ಸಿ. ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರ ಉಪಕರಣಗಳ ಸಣ್ಣ ಕೈಗಾರಿಕಾ ಸಂಸ್ಥೆ (ರಿ). ದಲಿತ ನಿರುದ್ಯೋಗಿಗಳ ಸಂಸ್ಥೆ, ನಂ.293, 8ನೇ ಮುಖ್ಯ ರಸ್ತೆ, 11ನೇ ಕ್ರಾಸ್, ಗೋಕುಲಂ, 3ನೇ ಹಂತ, ಮೈಸೂರು-570002.
3. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ.
4. ಹೆಚ್ಚಿನ ಪ್ರತಿ.
5. ಕಛೇರಿ ಪ್ರತಿ.